3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 5

ಚಾಸಾ 5

| | |
|---|---|
| ಹೆಸರು | ದೇವರಾಜು |
| ತಂದೆಯ ಹೆಸರು | ಹನುಮಂತರಾಯಪ್ಪ |
| ವಯಸ್ಸು | 30 ವರ್ಷ |
| ಉದ್ಯೋಗ | ಖಾಸಗಿ ಉದ್ಯೋಗ |
| ವಾಸಸ್ಥಳ | ಗೂಲಹಳ್ಳಿ |

ಸಾಕ್ಷಿಯನ್ನು ದಿನಾಂಕ 17.02.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಮೃತ ಸಂಜೀವರಾಯಪ್ಪರವರು ಗೊತ್ತು. ಆರೋಪಿಗಳು ಗೊತ್ತು. ಅವರು ನಮ್ಮ ಗ್ರಾಮದವರು. ಮೃತ ಸಂಜೀವರಾಯಪ್ಪರವರು ಪರಿಶಿಷ್ಟ ಜಾತಿಗೆ ಸೇರಿರುತ್ತಾರೆ. 2 ಮತ್ತು 3 ನೇ ಆರೋಪಿಗಳು ಒಕ್ಕಲಿಗ ಜಾತಿಗೆ ಸೇರಿರುತ್ತಾರೆ. 1 ನೇ ಆರೋಪಿ ಪರಿಶಿಷ್ಟ ಪಂಗಡಕ್ಕೆ ಸೇರಿರುತ್ತಾರೆ.

2) ದಿಃ 17.11.2019 ರಂದು ಪೊಲೀಸ್ ಪೇದೆಯ ಹುದ್ದೆಗೆ ಲಿಖಿತ ಪರೀಕ್ಷೆ ಇತ್ತು. ಆದ್ದರಿಂದ ನಾನು ಕಲಬುರ್ಗಿ ಗೆ ಹೋಗಿದ್ದೆ. ಅಂದು ನಾನು ಪರೀಕ್ಷೆ ಮುಗಿಸಿಕೊಂಡು ಕಲಬುರ್ಗಿ ಯಿಂದ ರಾತ್ರಿ ಹೊರಟು ದಿಃ 18.11.2019 ರಂದು ಬೆಳಿಗ್ಗೆ 11 ಗಂಟೆಗೆ ಊರಿಗೆ ಬಂದಿರುತ್ತೇನೆ. ಆಗ ಸಂಜೀವರಾಯಪ್ಪರವರು ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುತ್ತಾರೆಂದು ಗೊತ್ತಾಯಿತು. ನಾನು ಮನೆಯಲ್ಲಿದ್ದಾಗ ಸಂಜೀವರಾಯಪ್ಪರವರ ತಂದೆ ಬಸ್ತಪ್ಪರವರು ಬಂದು ದೂರನ್ನು ಬರೆಯಬೇಕೆಂದು

ಕೇಳಿರುತ್ತಾರೆ. ಅದರಂತೆ ಚಾಸಾ.1 ರವರು ಹೇಳಿದಂತೆ ನಾನು ದೂರನ್ನು ಬರೆದಿರುತ್ತೇನೆ. ಈಗ ನನಗೆ ತೋರಿಸಿದ ನಿಪಿ.1 ನನ್ನ ಹಸ್ತಾಕ್ಷರದಲ್ಲಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಬಸ್ತಪ್ಪರವರು ಅವಿದ್ಯಾವಂತರು. ಚಾಸಾ.1 ರವರು ಅವಿದ್ಯಾವಂತರಾದ ಕಾರಣ ನಿಪಿ.1 ರಲ್ಲಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ.

3) ಚಾಸಾ.1 ರವರು ನನಗೆ ತಿಳಿಸಿದ ಮಾಹಿತಿ ಏನೆಂದರೆ ದಿಃ 17.11.2019 ರಂದು ಸಂಜೆ ಅವರ ಮಗನಿಗೂ ಮತ್ತು 1 ಮತ್ತು 2 ನೇ ಆರೋಪಿತರೊಂದಿಗೆ ಯಾವುದೋ ವಿಚಾರದಲ್ಲಿ ಜಗಳವಾಗಿ ದೈಹಿಕವಾಗಿ ಹಲ್ಲೆ ಮಾಡಿರುತ್ತಾರೆ. ಅಂದು ಅವರು ಮತ್ತು ಅವರ ಹೆಂಡತಿ ಆಸ್ಪತ್ರೆಗೆ ಹೋಗಿದ್ದು , ಗಲಾಟೆಯಾಗಿದ್ದ ವಿಚಾರವನ್ನು ಚಾಸಾ.1 ರವರಿಗೆ ಅವರ ತಮ್ಮ ಹನುಮಂತರಾಯಪ್ಪರವರು ಕರೆ ಮಾಡಿ ಸಂಜೀವರಾಯಪ್ಪ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ ಎಂದು ಅವರು ನನಗೆ ಹೇಳಿರುತ್ತಾರೆ. ಚಾಸಾ.1 ರವರು ದೂರನ್ನು ಕೊಟ್ಟ ನಂತರ ಮಧುಗಿರಿ ಡಿವೈಎಸ್‌ಪಿ ರವರು ನನ್ನನ್ನು ಕರೆಸಿ ವಿಚಾರಣೆ ಮಾಡಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ :**

4) ನಾನು ಇಲ್ಲಿಯವರೆಗೆ ಒಂದೇ ದೂರನ್ನು ಬರೆದಿರುತ್ತೇನೆ. ನಾನು ಕಲಬುರ್ಗಿ ಯಲ್ಲಿ ಪೊಲೀಸ್ ಪೇದೆ ಪರೀಕ್ಷೆ ಬರೆಯಲು ಹೋಗಿದ್ದೆ. ಪರೀಕ್ಷೆಯು ದಿಃ 17.11.2019 ರಂದು ಇತ್ತು. ಪರೀಕ್ಷೆಯು ಮಧ್ಯಾಹ್ನ 12.30 ಗಂಟೆಗೆ ಮುಗಿದಿರುತ್ತದೆ. ಅಂದು ಸಂಜೆ 6 ಗಂಟೆಗೆ ನಾನು ರೈಲಿನಲ್ಲಿ ಕಲಬುರ್ಗಿಯಿಂದ ಹೊರಟಿರುತ್ತೇನೆ. ಕಲಬುರ್ಗಿಯಿಂದ ಮುಂಜಾನೆ 4.30 ರಿಂದ 5 ಗಂಟೆಗೆ ನಾನು ಹಿಂದೂಪುರಕ್ಕೆ ಬಂದಿರುತ್ತೇನೆ. ಹಿಂದೂಪುರದಿಂದ ನಮ್ಮ ಊರಿಗೆ ಬೆಳಿಗ್ಗೆ 11.30 ರಿಂದ 12 ಗಂಟೆಗೆ ಬಂದಿರುತ್ತೇನೆ. ನಾನು ಮನೆಯಲ್ಲಿದ್ದಾಗ ಚಾಸಾ.1 ರವರು ನಮ್ಮ ಮನೆಗೆ ಬಂದು ದೂರನ್ನು ಬರೆದುಕೊಡುವಂತೆ ಕೇಳಿರುತ್ತಾರೆ ಎಂದು ನಿಪಿ.1 ರಲ್ಲಿ ಬರೆದಿರುವುದಿಲ್ಲ.

5) ನಾನು ಕಳೆದ ವರ್ಷದವರೆಗೆ ಎಂ.ಎ. ಮಾಡುತ್ತಿದ್ದೆ. ಈಗ ಎನ್.ಬಿ.ಎಫ್.ಸಿ (Non banking financial corporation) ಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಪೊಲೀಸ್ ಕೆಲಸಕ್ಕೆ ನೇಮಕಗೊಂಡಿರುವುದಿಲ್ಲ. ಮೃತ ಸಂಜೀವರಾಯಪ್ಪ ಮತ್ತು ನಾನು ಸ್ನೇಹಿತರು ಎಂದರೆ ಸರಿ. ನಾನು ಮತ್ತು ಸಂಜೀವರಾಯಪ್ಪ ಯಾವುದೇ ಕೆಲಸಕ್ಕೆ ಹೋಗದೇ ಕುಡಿದು ಎಲ್ಲರ ಮೇಲೂ ಗಲಾಟೆ ಮಾಡುವುದು ನಮ್ಮ ಹವ್ಯಾಸ ಎಂದರೆ ಸರಿಯಲ್ಲ. ಆಗ ಗಸ್ತು ಪೊಲೀಸರು ನಮ್ಮ ಊರಿಗೆ ಬಂದು ಆ ರೀತಿ ಮಾಡಬಾರದು ಎಂದು ನಮಗೆ ಬುದ್ಧಿವಾದ ಹೇಳಿದರು ಎಂದರೆ ಸರಿಯಲ್ಲ. ಆಗ 2 ಮತ್ತು 3 ನೇ ಆರೋಪಿಗಳೂ ಸಹ ನಮಗೆ ಬುದ್ಧಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾವಿಬ್ಬರೂ ಸೇರಿ ಅವರಿಗೆ ಬಾಯಿಗೆ ಬಂದಂತೆ ಬೈದಿರುತ್ತೇವೆ ಎಂದರೆ ಸರಿಯಲ್ಲ. ಆಗ ಅವರು ಊರಿನ ಮುಖಂಡರನ್ನು ಸೇರಿಸಿ ನನಗೂ ಮತ್ತು ಮೃತ ಸಂಜೀವರಾಯಪ್ಪ ರವರಿಗೆ ಬುದ್ಧಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆರೋಪಿಗಳ ಮೇಲೆ ನಮ್ಮಿಬ್ಬರಿಗೂ ದ್ವೇಷ ಇತ್ತು ಎಂದರೆ ಸರಿಯಲ್ಲ. ಸಂಜೀವರಾಯಪ್ಪ ಕುಡಿದು ಆತನೇ ಮೃತಪಟ್ಟಿದುದ್ದ ಅದನ್ನು ದುರುಪಯೋಗಪಡಿಸಿಕೊಂಡು ಚಾಸಾ.1 ರವರು ಅವಿದ್ಯಾವಂತನಾಗಿದ್ದು ಆತನಿಗೆ ಯಾವುದೇ ತಿಳುವಳಿಕೆ ಇಲ್ಲದೇ ಇರುವುದರಿಂದ ಅದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರನ್ನು ತಯಾರುಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರು ನನ್ನನ್ನು ಕರೆದಿಲ್ಲ , ಅವರು ನನಗೆ ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ , ನಾನೇ ಪೊಲೀಸರೊಂದಿಗೆ ಶಾಮಿಲಾಗಿ ಸುಳ್ಳು ದೂರನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ ದಿನಾಂಕ ನೆನಪಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡು ಸಹಿಯನ್ನು ಪಡೆದುಕೊಂಡಿಲ್ಲ , ಆದರೆ ವೀಡಿಯೋ ಮಾಡಿಕೊಂಡಿರುತ್ತಾರೆ. ನನ್ನ

ಹೇಳಿಕೆಯಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ಅದರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ